**ದಿನಾಂಕ: 19.11.2020 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 31ನೇ ಸಭೆಯ ನಡವಳಿಗಳು**

**: ಅಧ್ಯಕ್ಷತೆ :**

**ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್**
**ಸನ್ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು**
**ಹಾಗೂ**
**ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.**

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿಗಳು:- (ಸದಸ್ಯರುಗಳು)**

1. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದೂ ಮಜ್ದೂರ್ ಸಭಾ, ಬೆಂಗಳೂರು
2. ಶ್ರೀ ಎಸ್. ಎಸ್ ಪ್ರಕಾಶಂ, ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು ಇವರ ಪರವಾಗಿ ಶ್ರೀ ನಾಗಪ್ಪ, ಪ್ರಧಾನ ಕಾರ್ಯದರ್ಶಿ, ಐಎನ್‌ಟಿಯುಸಿ, ಬೆಂಗಳೂರು
3. ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ, ರಾಜ್ಯ ಪ್ರತಿನಿಧಿ ಸದಸ್ಯರು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
4. ಶ್ರೀ ಕೆ. ವಿಶ್ವನಾಥ್ ಶೆಟ್ಟಿ, ಅಧ್ಯಕ್ಷರು, ಭಾರತೀಯ ಮಜ್ದೂರ್ ಸಂಘ, ಬೆಂಗಳೂರು ಇವರ ಪರವಾಗಿ ಶ್ರೀ. ಸುರೇಶ್ ಎಸ್ ನಾಡಿಗೇರ್ ಪ್ರಧಾನ ಕಾರ್ಯದರ್ಶಿ, ಭಾರತೀಯ ಮಜ್ದೂರ್ ಸಂಘ, ಬೆಂಗಳೂರು

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಮಾಲೀಕರ ಪರ ಪ್ರತಿನಿಧಿಗಳು:-(ಸದಸ್ಯರುಗಳು)**

1. ಶ್ರೀ ದುಶ್ಯಂತ ರಾಜಾನಂದ, ಟೆಕ್ನೀಕಲ್ ಅಸೀಸ್‌ಟೆಂಟ್-ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು (ಇವರ ಪರವಾಗಿ)
2. ಶ್ರೀ. ಅಬ್ದುಲ್ ಸತ್ತಾರ್, ಕಾರ್ಯದರ್ಶಿ, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು (ಅಧ್ಯಕ್ಷರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ರವರ ಪರವಾಗಿ)

**ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮನಿರ್ದೇಶಿತ ಸದಸ್ಯರು:**

1. ಡಾ.ರಾಜಕುಮಾರ್ ಖತ್ರಿ., ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು
3. ಶ್ರೀ. ಕೆ. ಶೇಖರ್, ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು
4. ಶ್ರೀ ಎಲಿಷ ಆಂಡ್ರೂಸ್, ಉಪ ಕಾರ್ಯದರ್ಶಿ-ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು (ಇವರ ಪರವಾಗಿ).
5. ಶ್ರೀ ಕೆ. ರೇಣುಕಪ್ಪ, ನಿರ್ದೇಶಕರು -ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ವಿಕಾಸಸೌಧ, ಬೆಂಗಳೂರು (ಇವರ ಪರವಾಗಿ)

**ಗೈರು ಹಾಜರಿದ್ದವರು:-**

1. ಅಧ್ಯಕ್ಷರು, CREDAI, ಬೆಂಗಳೂರು.
2. ಅಧ್ಯಕ್ಷರು, Construction Federation of India, New Dehli.

******

ಮಂಡಳಿಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸ್ವಾಗತಿಸಿದರು. ಮಂಡಳಿಯ 31ನೇ ಮಂಡಳಿ ಸಭೆಯನ್ನು ಜರುಗಿಸಿಕೊಡಬೇಕೆಂದು ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರನ್ನು ಕೋರಿದರು.

ದಿನಾಂಕ 30-09-2020 ರಂದು ನಡೆದ 30ನೇ ಸಭೆಯ ನಡವಳಿಗಳಿಗೆ ಕೈಗೊಳ್ಳಲಾದ ಕ್ರಮದ ಅನುಪಾಲನಾ ವರದಿಯನ್ನು ಸಭೆಗೆ ಮಂಡಿಸಿದರು.

ಅಧ್ಯಕ್ಷರು, ವಿಷಯ ಸಂಖ್ಯೆ: 16ಕ್ಕೆ ಸಂಬಂಧಿಸಿದಂತೆ ಸೇವಾ ಸಿಂಧು ತಂತ್ರಾಂಶದಲ್ಲಿ ಮಂಡಳಿಯ ಯೋಜನೆಗಳು ಸೌಲಭ್ಯಗಳ ವಿತರಣಾ ವ್ಯವಸ್ಥೆಯು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲವಾದ್ದರಿಂದ ಮಂಡಳಿಗೆ ಸಾರ್ವಜನಿಕರಿಂದ ಆಕ್ಷೇಪ ವ್ಯಕ್ತವಾಗುತ್ತಿದೆ. ಆದ್ದರಿಂದ ಎರಡು ತಿಂಗಳೊಳಗಾಗಿ ಮಂಡಳಿಯ ಎಲ್ಲಾ ಯೋಜನೆಗಳು ಹಾಗೂ ಎಲ್ಲಾ ಸೌಲಭ್ಯಗಳ ವಿತರಣೆಗಾಗಿ ಸ್ವಂತ ತಂತ್ರಾಂಶವನ್ನು ಅಭಿವೃದ್ಧಿಪಡಿಸಲು ಸೂಚಿಸಿದರು.

ವಿಷಯ ಸಂಖ್ಯೆ: 22ಕ್ಕೆ ಸಂಬಂಧಪಟ್ಟಂತೆ ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಉಪ ಕಾರ್ಮಿಕ ಆಯುಕ್ತರುಗಳಿಗೆ ಮಂಡಳಿಯ ಕೆಲಸಗಳಿಗಾಗಿ ವಾಹನ ನೀಡುವ ಕುರಿತು ಕೂಡಲೇ ಕ್ರಮ ವಹಿಸುವಂತೆ ಹಾಗೂ ಆದ್ಯತೆ ಮೇರೆಗೆ ಬೆಳಗಾವಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರಿಗೆ ಇನೋವಾ ವಾಹನವನ್ನು ಬಾಡಿಗೆ ಆಧಾರದ ಮೇಲೆ ಒದಗಿಸಲು ಕೂಡಲೇ ಕ್ರಮ ಜರುಗಿಸುವಂತೆ ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ತಿಳಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಇಲಾಖೆಯಿಂದ ನೀಡಿರುವ ವಾಹನಗಳ ಪೈಕಿ ಪ್ರಸ್ತುತ ದುರಸ್ಥಿಯಲ್ಲಿರುವ ಸರ್ಕಾರಿ ವಾಹನಗಳಿಗೆ ಸಂಬಂಧಪಟ್ಟ ಆರ್‌ಟಿಓ ಕಛೇರಿಯಿಂದ ವಾಹನದ ಸ್ಥಿತಿಗತಿಯ ಬಗ್ಗೆ ದೃಢೀಕರಣ ಪತ್ರ ಪಡೆದು ಅನುಪಯುಕ್ತವೆನಿಸಿದ್ದಲ್ಲಿ, ಸರ್ಕಾರದ ಆದೇಶದನ್ವಯ ಇಲಾಖೆಗೆ ವಾಪಸ್ಸು ನೀಡಿ, ನಂತರ ಅಗತ್ಯವಿದ್ದಲ್ಲಿ ಬಾಡಿಗೆ ಆಧಾರದ ಮೇಲೆ ವಾಹನವನ್ನು ಮಂಡಳಿಯಿಂದ ಪಡೆಯಲು ಸೂಚಿಸಿದರು.

ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಸದರಿ ವರ್ಷದಲ್ಲಿ ಯೋಜಿಸಲಾದ ಎಲ್ಲಾ ಹೊಸ ಯೋಜನೆಗಳಿಗೆ ಸಂಬಂಧಿಸಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳ) ಕರ್ನಾಟಕ ನಿಯಮಗಳಡಿ ಎಲ್ಲಾ ಹೊಸ ಯೋಜನೆಗಳನ್ನು ಕ್ರೋಢೀಕರಿಸಿ ಒಂದೇ ಬಾರಿಗೆ ತಿದ್ದುಪಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಮಂಡಳಿಯ ಕಾರ್ಯದರ್ಶಿಯವರಿಗೆ ಸೂಚಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಮಾತನಾಡುತ್ತಾ, ೩೦ನೇ ಸಭೆಯ ಅನುಪಾಲನಾ ವರದಿಯಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ನಮೂದಿಸಿರುವ ವಿಷಯಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಮುಂದಿನ ಮಂಡಳಿ ಸಭೆಯಲ್ಲಿ ಮಂಡಿಸಲು ಸೂಚಿಸಿದರು.

ಕಾರ್ಯಸೂಚಿಯ ಪ್ರಕಾರ ಸಭೆಯನ್ನು ನಡೆಸಲು ಮಾನ್ಯ ಅಧ್ಯಕ್ಷರು ಅನುಮತಿ ನೀಡಿದರು.

## ವಿಷಯ ಸಂಖ್ಯೆ-೦೨

**ಮಂಡಳಿಯ ಫಲಾನುಭವಿಗಳಿಗೆ ರೂಪಿಸಿರುವ ಕಾರ್ಮಿಕ ಗೃಹಭಾಗ್ಯ ಯೋಜನೆಯನ್ನು ಸಾಲ / ಮುಂಗಡ ಬದಲಾಗಿ ಸಹಾಯಧನವನ್ನಾಗಿ ಬದಲಾಯಿಸುವ ಕುರಿತು**

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.**

**ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಮಂಡಳಿಯ ಫಲಾನುಭವಿಗಳಿಗೆ ರೂಪಿಸಿರುವ ಕಾರ್ಮಿಕ ಗೃಹಭಾಗ್ಯ ಯೋಜನೆಯನ್ನು ಸಾಲ / ಮುಂಗಡ ಬದಲಾಗಿ ಸಹಾಯಧನವನ್ನಾಗಿ ಬದಲಾಯಿಸುವ ಬಗ್ಗೆ ಮುಂದುವರೆದ ಅಧ್ಯಯನದ ಅಗತ್ಯವಿರುತ್ತದೆ. ಆದುದರಿಂದ ಈ ಸಂಬಂಧ ಇತರೆ ರಾಜ್ಯಗಳ ಮಾದರಿ ಅನುಷ್ಠಾನವನ್ನು ಅವಲೋಕಿಸಿ ಕೂಲಂಕುಷವಾಗಿ ಪರಿಶೀಲಿಸಿದ ನಂತರ ಒಂದು ಮಾದರಿ ಯೋಜನೆಯನ್ನು ಮಂಡಳಿಗೆ ಅಳವಡಿಸಕೊಳ್ಳಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸುತ್ತಾ ಸದರಿ ವಿಷಯವನ್ನು ಚರ್ಚೆ ಮತ್ತು ಪರಿಶೀಲನೆಗಾಗಿ ಕಾಯ್ದಿರಿಸಿ ಮುಂದೂಡಲಾಯಿತು.**

## ವಿಷಯ ಸಂಖ್ಯೆ-೦೩

**ಟೂಲ್ ಕಿಟ್ ವಿತರಣೆಗಾಗಿ ಕ್ಯಾನ್‌ವಾಸ್ ಬ್ಯಾಗ್‌ಗಳನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು**

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಕ್ಯಾನ್‌ವಸ್ ಬ್ಯಾಗ್‌ಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರ ಟೆಂಡರ್ ಮೂಲಕ ಖರೀದಿಸಲು ಮತ್ತು ಮಂಡಳಿಯ ಹೆಸರು ಮತ್ತು ವಿಳಾಸವನ್ನು ಮುದ್ರಿಸಿ ವಿತರಿಸಲು ಸೂಚಿಸಿದರು. ಸದರಿ ಅಂಶವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

## ವಿಷಯ ಸಂಖ್ಯೆ-೦೪

**ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಬೈಸಿಕಲ್, ಹೊದಿಕೆ ಮತ್ತು ಕೊಡೆ ವಿತರಿಸುವ ಕುರಿತು**

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ಬೈಸಿಕಲ್ ಮತ್ತು ಕೊಡೆಯ ವಿತರಣೆಯನ್ನು ಕೈಬಿಟ್ಟು, ಹೊದಿಕೆಯನ್ನು ಈಗಾಗಲೇ ವಿತರಿಸಲು ಅನುಮೋದಿಸಿರುವ Essential Kit ನೊಂದಿಗೆ ಸೇರಿಸಿ ನೀಡಲು ಒಪ್ಪಲಾಯಿತು. ಸದರಿ ವಿಷಯವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

### ವಿಷಯ ಸಂಖ್ಯೆ-05

**ಕೋವಿಡ್-19 ಹಿನ್ನಲೆಯಲ್ಲಿ 50 ವರ್ಷ ದಾಟಿರುವ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಕುಟುಂಬದವರಿಗೆ ಆರೋಗ್ಯ ಸುರಕ್ಷಾ ಕಿಟ್ (ಸ್ಯಾನಿಟೈಸರ್, ಮಾಸ್ಕ್, ಸೊಳ್ಳೆಪರದೆ ಇತ್ಯಾದಿ) ವಿತರಿಸುವ ಕುರಿತು**

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಕೋವಿಡ್-19 ಹಿನ್ನಲೆಯಲ್ಲಿ 50 ವರ್ಷ ದಾಟಿರುವ ನೋಂದಾಯಿತ ಫಲಾನುಭವಿಗಳಿಗೆ ಮತ್ತು ಅವರ ಕುಟುಂಬದವರಿಗೆ ಆರೋಗ್ಯ ಸುರಕ್ಷಾ ಕಿಟ್ (ಸ್ಯಾನಿಟೈಸರ್, ಮಾಸ್ಕ್, ಸೊಳ್ಳೆಪರದೆ ಇತ್ಯಾದಿ) ವಿತರಿಸುವ ಕುರಿತು ನಿಗಧಿ ಪಡಿಸಿರುವ 50 ವರ್ಷಗಳ ಕಾಲಮಿತಿಯನ್ನು ತೆಗೆದು ಹಾಕುವಂತೆ ಮತ್ತು ಸ್ಯಾನಿಟೈಸರ್, ಮಾಸ್ಕ್, ವಿತರಣೆಯನ್ನು ಕೈಬಿಟ್ಟು ಸೊಳ್ಳೆಪರದೆಯನ್ನು ಈಗಾಗಲೇ ವಿತರಿಸಲು ಅನುಮೋದಿಸಿರುವ Essential Kit ನೊಂದಿಗೆ ಸೇರಿಸಿ ನೀಡಲು ಒಪ್ಪಿ ಕಾರ್ಯದರ್ಶಿಗಳಿಗೆ ಸೂಚಿಸಿದರು. ಇದನ್ನು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು.

### ವಿಷಯ ಸಂಖ್ಯೆ-06

**2020-21 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಅನುಮೋದಿಸಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ Preventive health care campaign ಯನ್ನು ಪೈಲಟ್ ಪ್ರೊಜೆಕ್ಟ್ ಆಧಾರದ ಮೇಲೆ ಆಯೋಜಿಸಲು ಅಪೊಲೋ ಸಂಸ್ಥೆಯ ಪ್ರಸ್ತಾವನೆಗೆ ಅನುಮೋದನೆ ನೀಡುವ ಕುರಿತು**

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

ಮಂಡಳಿಯ ಕಾರ್ಯದರ್ಶಿಗಳು ಮಾತನಾಡುತ್ತಾ, 2020-21ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಅನುಮೋದಿಸಿದಂತೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ Preventive health care campaign ಯನ್ನು ಪೈಲಟ್ ಪ್ರೊಜೆಕ್ಟ್ ಆಧಾರದ ಮೇಲೆ ಆಯೋಜಿಸಲು ಈಗಾಗಲೇ ಹೆಚ್.ಎಲ್.ಎಲ್ ಮತ್ತು ಕಿ.ಸಿ.ಎಂ.ಹೆಚ್ ಸಂಸ್ಥೆಗಳನ್ನು ಮಂಡಳಿಯ 30ನೇ ಸಭೆಯಲ್ಲಿ ಅನುಮೋದಿಸಲಾಗಿದೆ ಹಾಗೂ ಅಪೋಲೋ ಸಂಸ್ಥೆಯವರು ಕೂಡ Preventive health care campaign ಯನ್ನು ಪೈಲಟ್ ಪ್ರೊಜೆಕ್ಟ್ ಆಧಾರದ ಮೇಲೆ ಆಯೋಜಿಸಲು ಆಸಕ್ತಿ ವ್ಯಕ್ತಪಡಿಸಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ. ಮಂಡಳಿ ಹಾಗೂ ನಿರ್ದೇಶಕರು, ಕಾರ್ಮಿಕರ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ರವರನ್ನು ಒಳಗೊಂಡ ದ್ವಿಸದಸ್ಯ ಸಮಿತಿಯು ಪರಿಶೀಲಿಸಿದ್ದು, ಅಪೋಲೊ ಸಂಸ್ಥೆಯು ಸಿ.ಜಿ.ಹೆಚ್.ಎಸ್ ದರಗಳನ್ವಯ ಅವಶ್ಯಕವಿರುವ ಪರೀಕ್ಷೆಗಳ ಸೇವೆಯನ್ನು ನೀಡಲು ಒಪ್ಪಿರುವುದರಿಂದ ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಬಹುದೆಂದು ಶಿಫಾರಸ್ಸು ಮಾಡಿರುತ್ತದೆಂದು ಸಭೆಗೆ ಮಂಡಿಸಿದರು.

ಈ ಕುರಿತು ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಅಪೋಲೋ ಸಂಸ್ಥೆಯು ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆಯನ್ನು ನೀಡುತ್ತಿದ್ದು, ಈಗಾಗಲೇ ಅನುಮೋದಿಸಿರುವ ಸಂಸ್ಥೆಗಳಿಗೆ ವಿಧಿಸಲಾಗಿರುವ ಷರತ್ತಿಗೆ ಒಳಪಟ್ಟು ಸದರಿ ಸಂಸ್ಥೆಯೂ ಸಹ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲು ತಿಳಿಸಿದರು.

ಈ ಯೋಜನೆಯನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಜಿಲ್ಲೆಯನ್ನು ಆಯ್ಕೆ ಮಾಡುವ ಅಧಿಕಾರವನ್ನು ಮಂಡಳಿಯ ಕಾರ್ಯದರ್ಶಿಗಳಿಗೆ ನೀಡಿ ಸದರಿ ವಿಷಯವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

<u>ಸದರಿ ಸಂಸ್ಥೆಗಳಿಗೆ ಕೆ.ಟಿ.ಪಿ.ಪಿ. ಅಧಿನಿಯಮದ 4(ಜಿ) ವಿನಾಯಿತಿ ನೀಡಲು ಪ್ರಸ್ತಾಪಿಸಲು ಸೂಚಿಸಲಾಯಿತು.</u>

## ವಿಷಯ ಸಂಖ್ಯೆ-07

**ಶ್ರಮ ಸಾಮರ್ಥ್ಯ ಯೋಜನೆಯಡಿ ಫಲಾನುಭವಿಗಳ ಅವಲಂಬಿತ ಮಕ್ಕಳಿಗೆ ವೃತ್ತಿ ಸಮಾಲೋಚನೆ ಕಾರ್ಯಾಗಾರ ಹಮ್ಮಿಕೊಳ್ಳುವ ಕುರಿತು**

ತೀರ್ಮಾನ:

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಫಲಾನುಭವಿಗಳ ಅವಲಂಬಿತರ ಮಕ್ಕಳು ಎಸ್‌ಎಸ್‌ಎಲ್‌ಸಿ / ಪಿಯುಸಿ ವಿದ್ಯಾಭ್ಯಾಸ ಮಾಡುವಾಗ ಮುಂದೆ ಯಾವ ವಿಭಾಗದಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸಬೇಕು ಎಂಬುದರ ಬಗ್ಗೆ ಗೊಂದಲವಿರುತ್ತದೆ. ಸದರಿ ಕಾರ್ಯಾಗಾರವು ನೋಂದಾಯಿತ ಫಲಾನುಭವಿಗಳ ಅವಲಂಬಿತ ಮಕ್ಕಳಿಗೆ ಅನುಕೂಲಕರವಾಗಿದ್ದು, ಕಾರ್ಯಾಗಾರವನ್ನು ಹಮ್ಮಿಕೊಳ್ಳಲು ಮತ್ತು ಈಗಾಗಲೇ ಇದೇ ರೀತಿಯ ಕಾರ್ಯಾಗಾರವನ್ನು ಆಯೋಜಿಸುತ್ತಿರುವ ವಿವಿಧ ಸರ್ಕಾರಿ ಇಲಾಖೆಗಳಿಂದ ಮಾರ್ಗಸೂಚಿಗಳನ್ನು ಪಡೆದು ಕೆ.ಟಿ.ಪಿ.ಪಿ ನಿಯಮಾನುಸಾರ ಕ್ರಮಕೈಗೊಳ್ಳುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿದರು. ಸದರಿ ವಿಷಯವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## ವಿಷಯ ಸಂಖ್ಯೆ-08

**ಮೆ: ರಮೇಶ್ ಅಶ್ವಿನ್ & ಕಾರಂತ್ ಚಾರ್ಟರ್ಡ್ ಅಕೌಂಟೆಂಟ್ಸ್, ಸಂಸ್ಥೆಯನ್ನು ಮಂಡಳಿಯ ಆದಾಯ ತೆರಿಗೆ ವಿಷಯಗಳನ್ನು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸಲು ಇವರ ಸೇವೆಯನ್ನು 2020-21 ನೇ ಸಾಲಿಗೆ ಪಡೆಯುವ ಕುರಿತು.**

ತೀರ್ಮಾನ:

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

ಮೆ: ರಮೇಶ್ ಅಶ್ವಿನ್ & ಕಾರಂತ್ ಚಾರ್ಟರ್ಡ್ ಅಕೌಂಟೆಂಟ್ಸ್, ಸಂಸ್ಥೆಯು ಮಂಡಳಿಗೆ ಸಲ್ಲಿಸಿರುವ ದಾಖಲಾತಿಗಳನ್ನು ಸಭೆಯು ಪರಿಶೀಲಿಸಿತು. ನಂತರ ಅವರ ಸೇವಾ ಅನುಭವವನ್ನು ಪರಿಗಣಿಸಿ 2020-21ನೇ ಸಾಲಿಗೆ ಮಂಡಳಿಯ ಆದಾಯ ತೆರಿಗೆ ವಿಷಯಗಳನ್ನು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸಲು ಮೆ: ರಮೇಶ್ ಅಶ್ವಿನ್ & ಕಾರಂತ್ ಚಾರ್ಟರ್ಡ್ ಅಕೌಂಟೆಂಟ್ಸ್, ಸಂಸ್ಥೆಯ ಸೇವೆಯನ್ನು ಪಡೆಯಲು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

## ವಿಷಯ ಸಂಖ್ಯೆ-09

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ವಸತಿ ಸೌಲಭ್ಯಕ್ಕಾಗಿ ಜಿಲ್ಲಾ ಕೇಂದ್ರಗಳಲ್ಲಿ / ಕಾರ್ಪೊರೇಷನ್ ವ್ಯಾಪ್ತಿಯಲ್ಲಿ Transit Accommodation ಗಳ ನಿರ್ಮಾಣಕ್ಕಾಗಿ ಜಮೀನುಗಳನ್ನು ಖರೀದಿಸುವ ಅಥವಾ ಲೀಸ್ ಆಧಾರದ ಮೇಲೆ ಪಡೆಯುವ ಕುರಿತು**

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಮಂಡಳಿಯು 2013ನೇ ಸಾಲಿನಲ್ಲಿ ಕೆಐಎಡಿಬಿ ಗೆ ಸುಮಾರು ರೂ.83.00 ಕೋಟಿಯನ್ನು ಪಾವತಿಸಿ ವಿವಿಧ ಜಿಲ್ಲೆಗಳಲ್ಲಿ ಭೂಮಿಯನ್ನು ಖರೀದಿಸಿದ್ದು, ಹಾಸನ, ಬೆಳಗಾವಿ, ಬೆಂಗಳೂರು ಮತ್ತು ದಾವಣಗೆರೆಯಲ್ಲಿರುವ ಭೂಮಿಯನ್ನು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸುತ್ತೇನೆಂದು ಸಭೆಗೆ ತಿಳಿಸಿದರು. ಕೆಲವೊಂದು ಜಿಲ್ಲೆಗಳಲ್ಲಿ ಮಂಡಳಿಯು ಖರೀದಿಸಿರುವ ಭೂಮಿಯನ್ನು ಕೆಐಎಡಿಬಿ ಯು ಇದುವರೆವಿಗೂ ಮಂಡಳಿಯ ಹೆಸರಿಗೆ ಹಸ್ತಾಂತರಿಸಿರುವುದಿಲ್ಲ. ಹಾಗೂ ಸದರಿ ಭೂಮಿಗೆ ಕಾಂಪೌಂಡ್ ವ್ಯವಸ್ಥೆ ಮಾಡಬೇಕಾಗಿರುವುದರಿಂದ ಕೆಐಎಡಿಬಿ ಯೊಂದಿಗೆ ಕೂಡಲೇ ಸಭೆ ನಡೆಸಿ ಜಾಗ ಪಡೆಯಲು ಕೂಡಲೇ ಕ್ರಮಕೈಗೊಳ್ಳುವಂತೆ ತಿಳಿಸಿದರು.

ಈ ಕುರಿತು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಮಾತನಾಡುತ್ತಾ ಕೆಐಎಡಿಬಿ ಮುಖ್ಯಸ್ಥರೊಂದಿಗೆ ಸಭೆ ಕರೆಯಲು ಕ್ರಮ ಜರುಗಿಸುವುದಾಗಿ ಸಭೆಗೆ ತಿಳಿಸಿದರು. ಮುಂದುವರೆದು, ಸುಂಕ ಸಂಗ್ರಹಣೆ ಹಾಗೂ Transit Accommodation ಗಳ ನಿರ್ಮಾಣಕ್ಕಾಗಿ GEO Tagging ತಂತ್ರಾಂಶವನ್ನು ಅಳವಡಿಸುವುದು ಅತ್ಯವಶ್ಯಕವಾಗಿರುವುದರಿಂದ ಈ ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಡಾ|| ಪ್ರಭುದೇವ, ಕಾರ್ಮಿಕ ಅಧಿಕಾರಿ ರವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿ ಹಾಗೂ GEO Tagging ತಂತ್ರಾಂಶವನ್ನು ಅಳವಡಿಸುವಲ್ಲಿ ಹಾಜರಿದ್ದ ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿಗಳು ಸಹಕರಿಸುವಂತೆ ಕೋರಿದರು.

ಈ ಕುರಿತು ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ವಸತಿ ಸೌಲಭ್ಯಕ್ಕಾಗಿ ಜಿಲ್ಲಾ ಕೇಂದ್ರಗಳಲ್ಲಿ / ಕಾರ್ಪೊರೇಷನ್ ವ್ಯಾಪ್ತಿಯಲ್ಲಿ Transit Accommodation ಗಳ ನಿರ್ಮಾಣಕ್ಕಾಗಿ ಸರ್ಕಾರ / ಸರ್ಕಾರಿ ಪ್ರಾಧಿಕಾರಗಳ ಮೂಲಕ ಜಮೀನುಗಳನ್ನು ಖರೀದಿಸುವ ಅಥವಾ ಲೀಸ್ ಆಧಾರದ ಮೇಲೆ ಪಡೆಯುವ ಅಧಿಕಾರವನ್ನು ಮಂಡಳಿಯ ಕಾರ್ಯದರ್ಶಿಗಳಿಗೆ ನೀಡಲು ಸೂಚಿಸಿದರು. ಸದರಿ ಅಂಶವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## ಹೆಚ್ಚುವರಿ ಕಾರ್ಯಸೂಚಿ-01

**ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ರಿಯಾಯಿತಿ ದರದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ಪಾಸ್ ವಿತರಿಸಲು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಆರ್.ಟಿ.ಸಿ ಇವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.**

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್ ವಿತರಣೆ ಪ್ರಸ್ತಾವನೆಯು ಅತ್ಯುತ್ತಮವಾಗಿದ್ದು ಈಗಾಗಲೇ ಕರ್ನಾಟಕ ನಿಯಮಗಳು 2006ರ ನಿಯಮದಲ್ಲಿ ನೋಂದಾಯಿತ ಕಟ್ಟಡ ಕಾರ್ಮಿಕರ ಇಬ್ಬರು ಮಕ್ಕಳಿಗೆ ವಿಧ್ಯಾಭ್ಯಾಸಕ್ಕಾಗಿ ಕೆ.ಎಸ್.ಆರ್.ಟಿ.ಸಿ ಬಸ್‌ಪಾಸ್ ಸೌಲಭ್ಯವನ್ನು ವಿತರಿಸಲು ಅವಕಾಶವಿದ್ದು ಅದಕ್ಕಾಗಿ ರೂ.10.00 ಕೋಟಿಗಳನ್ನು ಮೀಸಲಿಡುವುದು ಹಾಗೂ 2020-21ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ಅನುಮೋದಿಸಿರುವಂತೆ ಬಿ.ಎಂ.ಟಿ.ಸಿ ಬಸ್‌ಪಾಸ್ ವಿತರಣೆಗೆ ರೂ.50.00 ಕೋಟಿಗಳಿಗಷ್ಟೆ ಸೀಮಿತಗೊಳಿಸುವುದೆಂದು ತಿಳಿಸಿದರು.

ಮುಂದುವರೆದು ನೋಂದಾಯಿತ ಫಲಾನುಭವಿಗಳಿಗೆ ಬಸ್‌ಪಾಸ್ ಸೌಲಭ್ಯ ವಿತರಣೆ ಅಗತ್ಯವಿದ್ದು ಅದಕ್ಕಾಗಿ ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆಗೆ (North West) ರೂ. 50 ಕೋಟಿ ಅನುದಾನ, ಆಗ್ನೇಯ ರಸ್ತೆ ಸಾರಿಗೆ ಸಂಸ್ಥೆಗೆ (North East) ರೂ. 50 ಕೋಟಿ ಅನುದಾನ ಮತ್ತು ಕೆ.ಎಸ್.ಆರ್.ಟಿ.ಸಿ ಸಂಸ್ಥೆಗೆ ರೂ.100 ಕೋಟಿ ಒಟ್ಟು ರೂ.200 ಕೋಟಿ ಅನುದಾನ ನೀಡುವುದು ಸೂಕ್ತವಾಗಿರುತ್ತದೆ ಎಂದು ಸಭೆಯು ತೀರ್ಮಾನಿಸಿತು. ಈ ಸಂಬಂಧ ಸದರಿ ನಿಯಮದಡಿ ಸೂಕ್ತ ತಿದ್ದುಪಡಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕಾರ್ಯದರ್ಶಿಯವರಿಗೆ ಸೂಚಿಸಿ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## ಹೆಚ್ಚುವರಿ ಕಾರ್ಯಸೂಚಿ-02

**ಮೆ|| ಗ್ಲೋಬಲ್ಸ್ ಸಂಸ್ಥೆಯವರು ಕಾರ್ಮಿಕರ ಡಾಟಾ ನಿರ್ವಹಣೆ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಯ ಕುರಿತು.**

**ತೀರ್ಮಾನ:**

ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು.

ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ದಿನಾಂಕ:30-09-2020 ರಂದು ನಡೆದ ಮಂಡಳಿಯ 30ನೇ ಸಭೆಯ ವಿಷಯ ಸಂಖ್ಯೆ: 16 ರಲ್ಲಿ ಮಂಡಳಿಯ ಕಾರ್ಯನಿರ್ವಹಣೆಗೆ ಅವಶ್ಯಕವಿರುವ ವಿವಿಧ ಸಾಫ್ಟ್‌ವೇರ್‌ಗಳನ್ನು ತಜ್ಞರಿಂದ ಪರಿಶೀಲಿಸಿ ಅಳವಡಿಸಿಕೊಳ್ಳಲು ಸವಿಸ್ತಾರವಾಗಿ ಚರ್ಚಿಸಿ ಅನುಮೋದನೆ ನೀಡಲಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಇಡೀ ಕಾರ್ಮಿಕ ಇಲಾಖೆಯ ಎಲ್ಲಾ ಕಾರ್ಮಿಕರ ಮಾಹಿತಿಯು ಒಂದೇ ಮೂಲ (Source) ದಡಿ ದೊರಕುವಂತೆ ಮಾಡುವ ಮತ್ತು ನಕಲಾಗುವುದನ್ನು (Duplicate) ತಪ್ಪಿಸಲು ಸಾಧ್ಯವಾಗುವಂತಹ ಹಾಗೂ ಸರ್ಕಾರಕ್ಕೆ ಮಾಹಿತಿ ಸಲ್ಲಿಸುವಾಗ ಕ್ರೋಢೀಕೃತ ಮಾಹಿತಿ ಸಲ್ಲಿಸಲು ಅನುವಾಗುವಂತಹ ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವ ಅಗತ್ಯವಿರುತ್ತದೆ.

ಮೆ|| ಗ್ಲೋಬಲ್ ಸಂಸ್ಥೆಯು ಈ ನಿಟ್ಟಿನಲ್ಲಿ ಉತ್ತಮ ತಂತ್ರಾಂಶವನ್ನು ಅಭಿವೃದ್ಧಿಪಡಿಸುವ ಸಂಸ್ಥೆಯಾಗಿರುವುದರಿಂದ ಮತ್ತು ಸದರಿ ಸಂಸ್ಥೆಯ ಬಳಿ G-CDMS ಮತ್ತು OEM ತಂತ್ರಾಂಶ ಇರುವುದರಿಂದ, ಸದರಿ ಸಂಸ್ಥೆಯ ಪ್ರಸ್ತಾವನೆಯನ್ನು ಪರಿಗಣಿಸಿ ಈ ಸಂಸ್ಥೆಗೆ ಮಂಡಳಿಯ ಕಾರ್ಮಿಕರ ಡಾಟಾ ನಿರ್ವಹಣಾ ಪ್ರಸ್ತಾವನೆಯನ್ನು ನಿರ್ವಹಿಸಲು ಅನುಮೋದನೆ ನೀಡಲು ಹಾಗೂ ಕೆ.ಟಿ.ಪಿ.ಪಿ. ಅಧಿನಿಯಮ, 4(ಜಿ) ರಡಿಯಲ್ಲಿ ವಿನಾಯಿತಿ ನೀಡಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಯಿತು.

ಮುಂದುವರೆದು, ತಂತ್ರಾಂಶ ಅಭಿವೃದ್ಧಿಗೆ ತಗಲುವ ವೆಚ್ಚವನ್ನು ಕಾರ್ಮಿಕ ಇಲಾಖೆ ಹಾಗೂ ಅದರಡಿ ಬರುವ ವಿವಿಧ ಮಂಡಳಿಗಳು ಪ್ರಮಾಣಾನುಗುಣವಾಗಿ ಭರಿಸಲು ಸೂಚಿಸಿ ಸರ್ವಾನುಮತದಿಂದ ಅನುಮೋದಿಸಿತು.

### ವಿಷಯ ಸಂಖ್ಯೆ-10

### ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಇತರೆ ವಿಷಯಗಳ ಚರ್ಚೆ

**ರಾಜ್ಯದಲ್ಲಿನ ನೊಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬಸ್‌ಗಳಲ್ಲಿ ಪ್ರಯಾಣಿಸುವ ಅನುಕೂಲವಾಗುವಂತೆ ರಿಯಾಯಿತಿ ದರದಲ್ಲಿ ಬಸ್‌ಪಾಸ್ ವಿತರಿಸುವ ಸಂಬಂಧ ಕೆಎಸ್‌ಆರ್‌ಟಿಸಿ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು**

**ತೀರ್ಮಾನ:**

ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ವಿಷಯ ಸೂಚಿ 01 ರಲ್ಲಿ ಚರ್ಚೆ ನಡೆಸಲಾಗಿರುವುದರಿಂದ ಸದರಿ ವಿಷಯವನ್ನು ಚರ್ಚೆಯಿಂದ ಕೈಬಿಡಲಾಗಿದೆ.

### ವಿಷಯ ಸಂಖ್ಯೆ – 10/1

**ಮಂಡಳಿಯ ಆಸ್ತಿ ವಿವರ ಹಾಗೂ ಸುಂಕ ಸಂಗ್ರಹಣೆಗಾಗಿ GEO Spatial ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿ ಅಳವಡಿಸುವ ಕುರಿತು**

ಮಾನ್ಯ ಅಪರ ಮುಖ್ಯಕಾರ್ಯದರ್ಶಿಗಳು ಮಾತನಾಡುತ್ತಾ, ಮಂಡಳಿಯ ಆಸ್ತಿಯನ್ನು ಮ್ಯಾಪ್ ಮಾಡಲು ಹಾಗೂ ಕೇಂದ್ರ ಸ್ಥಾನದಿಂದಲೇ ಪರಿವೀಕ್ಷಿಸಲು ಅನುವಾಗುವಂತೆ GEO **Spatial** ತಂತ್ರಾಂಶವನ್ನು ಅಭಿವೃದ್ಧಿಪಡಿಸುವ ಅಗತ್ಯವಿರುತ್ತದೆ. ಮತ್ತು ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಕಟ್ಟಡ ಮತ್ತು ಇತರೆ ಕಾಮಗಾರಿ ಸ್ಥಳಗಳನ್ನು ವೀಕ್ಷಿಸಿ ಮಂಡಳಿಗೆ ಬರಬೇಕಾದ ಸುಂಕ ಸಂಗ್ರಹಣೆಗೆ GEO **Spatial** ತಂತ್ರಾಂಶವು ಸಹಾಯವಾಗುವುದೆಂದು ಸೂಚಿಸಿದರು.

ಸದರಿ ವಿಷಯವನ್ನು ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಒಪ್ಪಿ ಎಲ್ಲಾ ಜಿಲ್ಲೆಗಳಲ್ಲಿ GEO **Spatial** ತಂತ್ರಾಂಶವನ್ನು ಅಳವಡಿಸಿ ಮಂಡಳಿಯ ಆಸ್ತಿಯನ್ನು ವೀಕ್ಷಿಸಲು ಹಾಗೂ ಸುಂಕ ಸಂಗ್ರಹಣೆ ಮಾಡಲು ಅನುವಾಗುವಂತೆ ನಗರಾಭಿವೃದ್ಧಿ ಇಲಾಖೆಯೊಂದಿಗೆ ಚರ್ಚಿಸಿ ಯೋಜನೆಯನ್ನು ಕ್ರಮಕೈಗೊಳ್ಳುವಂತೆ ಸೂಚಿಸಿದರು. ಸದರಿ ವಿಷಯವನ್ನು ಸರ್ವಾನುಮತದಿಂದ ಅನುಮೋದಿಸಿತು.

### ವಿಷಯ ಸಂಖ್ಯೆ – 10/2

**ಬಾಕಿ ಅರ್ಜಿಗಳ ವಿಲೇವಾರಿಯ ಬಗ್ಗೆ**

ಶ್ರೀ ನಾಗನಾಥ್ ಪ್ರಧಾನ ಕಾರ್ಯದರ್ಶಿ ಹಿಂದು ಮಜ್ದೂರ್ ಸಭಾ (ಹೆಚ್.ಎಂ.ಎಸ್) ಇವರು ಮಾತನಾಡುತ್ತಾ ನೋಂದಣಿಗಾಗಿ ಸಲ್ಲಿಸಿರುವ ಅರ್ಜಿಗಳು ಮೂರು ತಿಂಗಳಿಂದ ಬಾಕಿ ಇರುತ್ತವೆ. ಈ ಅರ್ಜಿಗಳನ್ನು ವಿಲೇವಾರಿ ಮಾಡಲು ಕೂಡಲೇ ಕ್ರಮಜರುಗಿಸಬೇಕೆಂದು ಸಭೆಯನ್ನು ಕೋರಿದರು.

8

43

ಅಲ್ಲದೆ ಭಾರತೀಯ ಮಜ್ದೂರ್ ಸಂಘ, ಬೆಂಗಳೂರು ಇದರ ಪ್ರತಿನಿಧಿಯಾದ ಶ್ರೀ ಸುರೇಶ್ ಎಸ್ ನಾಡಿಗೇರ್ ಇವರೂ ಸಹ ಬಾಕಿ ಇರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಲು ಕ್ರಮವಹಿಸಲು ತಿಳಿಸುತ್ತಾ, ಪ್ರಸ್ತುತ ಮದುವೆ ಸಹಾಯಧನ ನೀಡುತ್ತಿರುವ ರೂ.50.000/- ಗಳಲ್ಲಿ ರೂ.25,000/- ಗಳನ್ನು ಫಲಾನುಭವಿಯ ಖಾತೆಗೆ ಹಾಗೂ ರೂ.25,000/- ಗಳನ್ನು ವಧುವಿನ ಹೆಸರಿಗೆ ಬ್ಯಾಂಕ್‌ನಲ್ಲಿ ಬಾಂಡ್ ರೂಪದಲ್ಲಿ ಮೂರು ವರ್ಷದ ಅವಧಿಗೆ ಠೇವಣಿ ಇಡಲಾಗುತ್ತಿದ್ದು ಸದರಿ ವ್ಯವಸ್ಥೆಗೆ ಬದಲಾಗಿ ಒಂದೇ ಬಾರಿಗೆ ಪೂರ್ಣ ಪ್ರಮಾಣದಲ್ಲಿ ರೂ.50,000/- ಗಳನ್ನು ಫಲಾನುಭವಿಯ ಖಾತೆಗೆ ಜಮೆ ಮಾಡಲು ಕೋರಿದರು.

ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಮದುವೆ ಸಹಾಯಧನದಲ್ಲಿ ರೂ.25,000/- ಗಳನ್ನು ವಧುವಿನ ಹೆಸರಿಗೆ ಬ್ಯಾಂಕ್‌ನಲ್ಲಿ ಬಾಂಡ್ ರೂಪದಲ್ಲಿ ಮೂರು ವರ್ಷದ ಅವಧಿಗೆ ಠೇವಣಿ ಇಡುತ್ತಿರುವುದು ಸೂಕ್ತವೆಂದು ಸಭೆಗೆ ತಿಳಿಸಿದರು. ಮುಂದುವರೆದು ಬಾಕಿ ಅರ್ಜಿಗಳಿಗೆ ಸಂಬಂಧಿಸಿದಂತೆ ನೋಂದಣಿಗಾಗಿ ಹಾಗೂ ವಿವಿಧ ಸೌಲಭ್ಯಗಳಿಗಾಗಿ ಸ್ವೀಕೃತವಾದ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಲು ಹಾಗೂ ನೋಂದಣಿ ಕಾರ್ಯವನ್ನು ಪುನರಾಂಭಿಸಲು ಕ್ರಮವಹಿಸುವಂತೆ ತಿಳಿಸಿದರು. ಅಲ್ಲದೆ ಪ್ರತ್ಯೇಕ ತಂತ್ರಾಂಶವನ್ನು ಕೂಡಲೇ ರಚಿಸಲು ಇಲಾಖೆ ಅಧಿಕಾರಿಗಳಿಗೆ ಹಾಗೂ ಮಂಡಳಿಯ ಅಧಿಕಾರಿಗಳಿಗೆ ಸೂಚಿಸಿದರು.

**ವಿಷಯ ಸಂಖ್ಯೆ – 10/3**

**ಕಾರ್ಮಿಕ ಇಲಾಖೆಯ ಅಧಿಕಾರಿಗಳು, ಕಾರ್ಮಿಕ ನಿರೀಕ್ಷಕರು ಮತ್ತು ಹಿರಿಯ ಕಾರ್ಮಿಕ ನಿರೀಕ್ಷಕರು ಹಾಗೂ ಸಿಬ್ಬಂದಿಗಳಿಗೆ ಮಂಡಳಿಯ ಸೌಲಭ್ಯಗಳ ವಿಲೇವಾರಿ ಕುರಿತು ತರಬೇತಿ ನೀಡುವ ಬಗ್ಗೆ**

ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದೂ ಮಜ್ದೂರ್ ಸಭಾ, ಬೆಂಗಳೂರು ಇವರು ಮಾತನಾಡುತ್ತಾ, ಇವರು ಸೌಲಭ್ಯಕ್ಕಾಗಿ ಸಲ್ಲಿಸುವ ಅರ್ಜಿಗಳ ವಿಳಂಬವಾಗಿ ವಿಲೇವಾರಿಯಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು. ಇದಕ್ಕೆ ಮಂಡಳಿಯ ಕಾರ್ಯದರ್ಶಿಯವರು Common Service Centre (ಸಿಎಸ್‌ಸಿ) ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕರಿಸಲಾಗುತ್ತಿದ್ದು, ಅರ್ಜಿಗಳನ್ನು ಪೂರಕ ದಾಖಲೆಗಳೊಂದಿಗೆ ಪರಿಶೀಲಿಸಿ ಅಪಲೋಡ್ ಮಾಡಿರುವುದಿಲ್ಲ. ಅರ್ಜಿಗಳನ್ನು ಕೂಲಂಕುಷವಾಗಿ ಈ ಹಂತದಲ್ಲಿಯೇ ಪರಿಶೀಲಿಸಿ ಅಪ್‌ಲೋಡ್ ಮಾಡಲು ಅವರುಗಳಿಗೆ ಅರಿವಿನ ಕೊರತೆ ಇರುತ್ತದೆಂದು ಸಭೆಯ ಗಮನಕ್ಕೆ ತಂದರು.

ಮುಂದುವರೆದು, ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಕಾರ್ಮಿಕ ಇಲಾಖೆಯ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು ಹಾಗೂ ಸಿಬ್ಬಂದಿಗಳಿಗೆ ಮತ್ತು ಜಿಲ್ಲೆ / ತಾಲ್ಲೂಕುಗಳಲ್ಲಿ ಕೆಲಸ ನಿರ್ವಹಿಸುವ ಮಂಡಳಿಯ ಹೊರಗುತ್ತಿಗೆ ನೌಕರರಿಗೆ ಮಂಡಳಿಯ ಸೌಲಭ್ಯಗಳ ವಿಲೇವಾರಿ ಹಾಗೂ ಕಾರ್ಮಿಕ ಇಲಾಖೆ ಮತ್ತು ಅದರಡಿ ಬರುವ ಎಲ್ಲಾ ಮಂಡಳಿಗಳ ಕಾರ್ಯಕ್ರಮಗಳ ಕುರಿತು ಡಿಸೆಂಬರ್ ಮೊದಲನೇ ವಾರದಲ್ಲಿ ಜಿಲ್ಲಾವಾರು ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲು ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಇದಕ್ಕೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ತರಬೇತಿಯನ್ನು ಆಯೋಜಿಸಲು ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಜಿಲ್ಲಾವಾರು ತರಬೇತಿ ದಿನಾಂಕವನ್ನು ನಿಗಧಿ ಪಡಿಸುವುದಾಗಿ ಸಭೆಗೆ ತಿಳಿಸಿದರು.

**ವಿಷಯ ಸಂಖ್ಯೆ – 10/4**

**ಮಂಡಳಿಯ ಅಧಿಕಾರೇತರ ಸದಸ್ಯರಿಗೆ ಕೋವಿಡ್-19 ರ ವೈದ್ಯಕೀಯ ವೆಚ್ಚ ಮರುಪಾವತಿ ನೀಡುವ ಬಗ್ಗೆ**

ಮಂಡಳಿಯ ಅಧಿಕಾರೇತರ ಸದಸ್ಯರು ತಮ್ಮ ಸಂಘಟನೆಗಳ ಮೂಲಕ ಕಾರ್ಮಿಕರ ಹೇಳಿಗೆಗಾಗಿ ಶ್ರಮಿಸುತ್ತಿದ್ದು ಸದರಿ ಸದಸ್ಯರಿಗೆ ಕೋವಿಡ್-19ಗೆ ತುತ್ತಾದಲ್ಲಿ ಅವರ ವೈದ್ಯಕೀಯ ವೆಚ್ಚ ಭರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಂಡಳಿ ವತಿಯಿಂದ ವೈದ್ಯಕೀಯ ವೆಚ್ಚ ನೀಡುವಂತೆ ಅನೇಕ ಸದಸ್ಯರು ಸಭೆಯಲ್ಲಿ ಕೋರಿದರು. ಈ ಹಿನ್ನಲೆಯಲ್ಲಿ ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ ಸದರಿ ಸದಸ್ಯರ ಹಿತರಕ್ಷಣೆಯು ಮಂಡಳಿಯ ಕರ್ತವ್ಯವಾಗಿದ್ದು ಅವರುಗಳು ಕೋವಿಡ್-19ಗೆ ತುತ್ತಾದಲ್ಲಿ ಅವರ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡಲಾಗುವುದು ಎಂದು ಭರವಸೆ ನೀಡಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸಂಖ್ಯೆ – 10/5**

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನೀಡುವ ತರಬೇತಿ ಕಾರ್ಯಕ್ರಮದಲ್ಲಿ ಶಿವ ಶಕ್ತಿ ಮಹಿಳಾ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆಯನ್ನು ಸೇರಿಸಿಕೊಳ್ಳುವ ಬಗ್ಗೆ**

ಶಿವ ಶಕ್ತಿ ಮಹಿಳಾ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆಯು ಕರ್ನಾಟಕದ ಹೆಸರಾಂತ ಮಹಿಳಾ ಸರ್ಕಾರೇತರ ಸಂಸ್ಥೆಯಾಗಿದ್ದು, ಹಲವಾರು ಒಳ್ಳೆಯ ಹಾಗೂ ಮಹೋನ್ನತ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸುತ್ತ ಬಂದಿದೆ. ಈ ಸಂಸ್ಥೆಯು ಸುಮಾರು 200 ಮಂದಿ ಮಹಿಳೆಯರಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಟ್ಟಿರುತ್ತದೆ ಮತ್ತು ಕಟ್ಟಡ ಮತ್ತು ಇತರೆ ನಿರ್ಮಾಣದಲ್ಲಿ ತೊಡಗಿರುವ ಸುಮಾರು 2500 ದಿಂದ 3000 ಕೆಲಸಗಾರರಿಗೆ ತರಬೇತಿ ನೀಡಿ ಕೌಶಲ್ಯಯುತ ಕೆಲಸಗಾರರಾಗಿ ರೂಪಿಸಿದೆ. ಹಾಗೂ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಲ್ಲಿಯೂ ಸಹ ಸುಮಾರು 500 ಮಂದಿಗೆ ಗಾರೆ ಕೆಲಸ ತರಬೇತಿ ನೀಡುತ್ತಿದ್ದು ಇವರ ಸಹಭಾಗಿತ್ವದೊಂದಿಗೆ 20 ತಾಲ್ಲೂಕುಗಳಲ್ಲಿ ತರಬೇತಿ ಶಿಬಿರವನ್ನು ಹಮ್ಮಿಕೊಂಡಿರುತ್ತದೆ ಎಂದು ಮಂಡಳಿಯ ರಾಜ್ಯ ಪ್ರತಿನಿಧಿ ಸದಸ್ಯರಾದ ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ ರವರು ಸಭೆಗೆ ತಿಳಿಸಿದರು.

ಮುಂದುವರೆದು, ಶಿವ ಶಕ್ತಿ ಮಹಿಳಾ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆಯು Sector Skill Council, National Skill Development Corporation & KSDC ಯ ಅಂಗ ಸಂಸ್ಥೆಯಾಗಿದ್ದು, ಮಂಡಳಿ ವತಿಯಿಂದ ನೀಡಲಾಗುವ ತರಬೇತಿ ಕಾರ್ಯಕ್ರಮ ಆಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರು ಕೆಎಸ್‌ಡಿಸಿ ರವರು ಕೋರಿರುತ್ತಾರೆಂದು ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

ಮುಂದುವರೆದು, ಮಾನ್ಯ ಸಚಿವರು ಹಾಗೂ ಅಧ್ಯಕ್ಷರು ಮಾತನಾಡುತ್ತಾ, ಸದರಿ ಸಂಸ್ಥೆಯ ಸೇವೆಯು ಶ್ಲಾಘನೀಯವಾಗಿದ್ದು ಕೇವಲ ಮಹಿಳೆಯರನ್ನು ಒಳಗೊಂಡ ಸರ್ಕಾರೇತರ ಸಂಸ್ಥೆಯಾಗಿದ್ದು ಮಹಿಳೆಯರಿಗೆ ಪ್ರೋತ್ಸಾಯಿಸುವುದು ಅವಶ್ಯವಿದೆ ಎಂದು ತಿಳಿಸಿ ಅವರನ್ನು ಮಂಡಳಿ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನೀಡಲಾಗುವ ತರಬೇತಿ ಕಾರ್ಯಕ್ರಮ ಆಯೋಜನೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಬಹುದಾಗಿರುತ್ತದೆಂದು ಸಭೆಗೆ ತಿಳಿಸಿದರು. ಇದಕ್ಕೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## ವಿಷಯ ಸಂಖ್ಯೆ – 10/6

**ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಪೈಲಟ್ ತರಬೇತಿ ನೀಡುವ ಬಗ್ಗೆ**

ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಪೈಲಟ್ ತರಬೇತಿ ನೀಡುವ ಪ್ರಸ್ತಾವನೆ ಬಗ್ಗೆ ಗುಲ್ಬರ್ಗ ಜಿಲ್ಲಾಧಿಕಾರಿಗಳಾದ ಶ್ರೀಮತಿ ವಸಿರೆಡ್ಡಿ ವಿಜಯ ಜೋತ್ಸ್ನಾ ರವರೊಂದಿಗೆ ಚರ್ಚಿಸಿರುವುದಾಗಿ ಸಚಿವರು ಹಾಗೂ ಅಧ್ಯಕ್ಷರು ಸಭೆಗೆ ಮಂಡಿಸಿದರು ಹಾಗೂ ಸದರಿ ಯೋಜನೆಯು ಕೇಂದ್ರ ಸರ್ಕಾರದ ನಿಯೋಜಿತ ಯೋಜನೆಯಾಗಿದ್ದು, ಉದ್ಯೋಗ ಖಾತ್ರಿ (Job Guarantee) ನೀಡುವ ತರಬೇತಿಯಾಗಿರುತ್ತದೆ. ಸದರಿ ತರಬೇತಿಗೆ ವಿಧ್ಯಾರ್ಥಿ ಒಬ್ಬರಿಗೆ 35 ರಿಂದ 40 ಲಕ್ಷ ರೂಗಳು ಖರ್ಚಾಗುತ್ತದೆ. ಆದ್ದರಿಂದ ಇಂತಹ ಮಹತ್ವಕಾಂಕ್ಷಿ ಯೋಜನೆಯಡಿ ನೋಂದಾಯಿತ ಕಾರ್ಮಿಕರ 10 ಮಕ್ಕಳಿಗೆ ತರಬೇತಿಯನ್ನು ನೀಡುಬಹುದಾಗಿರುತ್ತದೆ. ಈ ಸಂಬಂಧ ಮಾರ್ಗಸೂಚಿಯನ್ನು ಗುಲ್ಬರ್ಗ ಜಿಲ್ಲಾಧಿಕಾರಿಗಳಿಂದ ತರಿಸಿ ಕ್ರಮಕೈಗೊಳ್ಳುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು.

ಇದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಂದನಾರ್ಪಣೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಅರಬೈಲ್ ಶಿವರಾಮ್ ಹೆಬ್ಬಾರ್)
ಸನ್ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು
ಹಾಗೂ
ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರ
ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ